ಯವರನ್ನು ತೆಗಳುತ್ತಾರೆ. ಜನರೆದುರು ತಮ್ಮನ್ನೇ ಹೊಗಳಿಕೊಳ್ಳುತ್ತಾರೆ. ಅಲ್ಲದೆ ತಾಲ್ಲೂಕು ಮಟ್ಟದ ಅಭಿವೃದ್ಧಿ ಸಭೆಯಲ್ಲಿ ಇಡೀ ಗ್ರಾಮದ ವಿದ್ಯುದ್ದೀಕರಣ ಕೆಲಸ ತೃಪ್ತಿಕರವಾಗಿ ಪೂರ್ತಿಯಾಗಿರುವುದಾಗಿ ಹೇಳಿಕೆ ಕೊಟ್ಟು ಇಲಾಖೆಯ ಅಧಿಕಾರಿಗಳು ಎರಡೂ ವರ್ಷಗಳಿಗೆ ಮೊದಲೇ ಶಹಬಾಸ್‌ಗಿರಿಯನ್ನು ಪಡೆದುಕೊಂಡಿದ್ದಾರೆ.

ಸರಕಾರದ ಗ್ರಾಮೀಣ ವಿದ್ಯುದ್ದೀಕರಣ, ಭಾಗ್ಯಜ್ಯೋತಿ ಹಾಗೂ ಇತರ ಯೋಜನೆಗಳು ಪಟ್ಟಣ ಹಾಗೂ ಬಯಲು ಪ್ರದೇಶಗಳಿಗೆ ಮಾತ್ರ ಸೀಮಿತವೆನ್ನುವಂತೆ ತೋರುತ್ತದೆ. ಪೂರ್ಣ ಘಟ್ಟ ಪ್ರದೇಶವಾದ ಬಾಡಗ, ಕಿದವಳ್ಳೂರು ಕಡಂಗಮಡೂರು ಶ್ರೀಮಂಗಲ ಹುದಿಕೇರಿ ಇನ್ನೂ ಹಲವಾರು ಗ್ರಾಮದ ಅರ್ಧದಷ್ಟು ಜನರಿಗೆ ಈ ಯೋಜನೆಯಿಂದ ಯಾವುದೇ ಪ್ರಯೋಜನ ದೊರಕಿಲ್ಲ. ಸಧ್ಯದಲ್ಲಿ ಅದು ದೊರಕುವ ಸಾಧ್ಯತೆ ಇಲ್ಲವೆಂದು ಹೇಳಬಹುದು. ಸರಕಾರದ ಪ್ರತಿನಿಧಿಗಳು ಬಂದು ಸಭೆ ಕರೆದಾಗ ತಮ್ಮ ಪ್ರಗತಿಯನ್ನು ತೋರಿಸಲು ಇಲಾಖೆಯ ಅಧಿಕಾರಿಗಳು ಹೊಡಿರುವ ಸಂಚು ಇದೆಂದೂ ಹಾಗೂ ಜನತೆಯ ಬಳಿಗೆ ಪ್ರತಿನಿಧಿಗಳು ಹೋಗಬೇಕಾದಾಗ ಅವರನ್ನು ಸಂಪರ್ಕಿಸಲು ಹಾಗೂ ಮೆಚ್ಚಿಸಲು ಸರಕಾರ ಹೂಡಿರುವ ತಂತ್ರವೆಂದು ಜನಸಾಮಾನ್ಯರು ಭಾವಿಸಬೇಕಾಗಿದೆ.

ಆದ್ದರಿಂದ ವಿವಾದಾತ್ಮಕ ಹೇಳಿಕೆಗಳ ಬಗ್ಗೆ ಸ್ಪಷ್ಟೀಕರಣ ನೀಡಬೇಕೆಂದು ಮತ್ತು ಭಾಗ್ಯಜ್ಯೋತಿಯ ಭಾಗ್ಯವನ್ನು ಘಟ್ಟ ಪ್ರದೇಶವಾದಂತಹ ಕೊಡಗಿನ ಬಡ ಜನರಿಗೆ ಒದಗಿಸಿ ಕೊಡಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯಣಿಯವರಾದ ಸುಮಾ ವಸಂತರವರ ಪ್ರಸ್ತಾಪಿಸಿರುವ ಮೇಲಿನ ವಿಷಯದ ಬಗ್ಗೆ ಇವತ್ತು ಬೆಳಿಗ್ಗೆ ಬಂದಿದೆ, ಅದಕ್ಕೆ ಸಂಪೂರ್ಣ ವಿವರವನ್ನು ತರಿಸುವುದು ತಡವಾಗಿದೆ ನಾಳೆ ಅವರಿಗೆ ಉತ್ತರವನ್ನು ಕೊಡುತ್ತೇನೆ, ಆದರೂ ಕೂಡಾ ಅವರಿಗೆ ಕೆಲವೊಂದು ವಿಷಯವನ್ನು ಹೇಳುತ್ತೇನೆ. ನಮ್ಮ ಯೋಜನೆಯ ಪ್ರಕಾರ ನಾವೇನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೆವೆಯೋ ಅದು ಯಾವುದೂ ಕೂಡಾ ಟಾರ್ಗೆಟ್ ಒಳಗಡೆ ಇಲ್ಲ. ಟಾರ್ಗಟ್ ಮೀರಿ ಕೆಲಸ ಮಾಡಿದ್ದೇವೆ. ಯಾವುದಾದರೂ ತೊಂದರೆಯಿಂದ ಕೆಲಸ ಆಗದೇ ಹೋಗಿದ್ದರೆ ಅದನ್ನು ಪೂರ್ಣ ಮಾಡಿಸುವುದಕ್ಕೆ ತಕ್ಷಣ ವ್ಯವಸ್ಥೆಯನ್ನು ಮಾಡುತ್ತೇನೆ.

೩) ಮಂಗಳೂರು–ಕೇರಳ ಹೆದ್ದಾರಿಯ ತೊಕ್ಕಟ್ಟಿನಲ್ಲಿ ಸರ್ಕಲ್ ನಿರ್ಮಾಣ ಮಾಡುವುದು

ಶ್ರೀ ಪಿ ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ಮಂಗಳೂರಿನಿಂದ ೧೦ ಕಿಲೋಮೀಟರ್ ದೂರದಲ್ಲಿ ಕೇರಳಕ್ಕೆ ಹೋಗುವ ಹೆದ್ದಾರಿಯ ಬದಿಯಲ್ಲಿ ತೊಕ್ಕೊಟು ಪೇಟೆ ಇದೆ. ಇಲ್ಲಿ ಅನೇಕ ವರ್ಷಗಳಿಂದ ಕಮರ್ಷಿಯಲ್ ಚೆಕ್‌ಪೋಸ್ಟ್ ಕೂಡಾ ಇದೆ. ಮಂಗಳೂರು ವಿಶ್ವವಿದ್ಯಾಲಯಕ್ಕೆ ಹೋಗುವ ಮತ್ತೊಂದು ರಸ್ತೆಯೂ ಇಗ. ಈ ಭಾಗದಲ್ಲಿ ೫೦ಕ್ಕೂ ಮಿಕ್ಕಿ ಸಿಟಿ ಬಸ್ಸುಗಳು ಓಡಾಡುತ್ತಿವೆ. ಕರ್ಮರ್ಷಿಯಲ್ ಚೆಕ್‌ಪೋಸ್ಟ್ ಇರುವುದರಿಂದ ಸರಕು ತುಂಬಿದ ಸಂಖ್ಯೆಗಟ್ಟಲೆ ಲಾರಿಗಳು ಇಲ್ಲಿ ಸದಾ ನಿಂತಿರುತ್ತವೆ. ಸಿಟಿ ಬಸ್ಸ್‌ಗಳ ನಿಲ್ದಾಣವೂ ಇದೇ ಆಗಿದೆ, ಆದ್ದರಿಂದ ಇಲ್ಲಿ ಭಾರೀ ನೂಕಾಟಕ್ಕೆ ಜನಸಂದಣಿ, ವಾಹನಗಳ ತಿಕ್ಕಾಟ ಯಾವಾಗಲೂ ಇರುತ್ತದೆ. ಅನೇಕ ಅಪಘಡಗಳೂ ಇಲ್ಲಿ ಸಂಭವಿಸಿದೆ.

ಆದಕಾರಣ ತೊಕ್ಕೊಟ್ಟಿನಲ್ಲಿ ಒಂದು ಸರ್ಕಲ್ ಮಾಡುವುದು ಅತೀ ಅಗತ್ಯ. ಚೆಕ್‌ಪೋಸ್ಟಿನ ಲಾರಿಗಳನ್ನು ನಿಲ್ಲಿಸಲು ಮೇಲ್ಬಾಗದಲ್ಲಿ ರಸ್ತೆಯಲ್ಲಿ ಪಾರ್ಕಿಂಗ್ ಮಾಡಬೇಕು ಬಸ್‌ಗಳೆಲ್ಲಾ ಹೆದ್ದಾರಿಯಲ್ಲಿ ನಿಲ್ಲುವಂತಾಗಬೇಕು. ಈ ಕುರಿತು ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳಿಗೆ ಬರೆದಿದ್ದರೂ ಏನೂ ವ್ಯವಸ್ಥೆ ಆಗಿಲ್ಲ. ಈ ಕುರಿತು ಸಣ್ಣ ಉಳಿತಾಯ ಮತ್ತು ಆರ್ಥಿಕ ರಾಜ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಪ್ರೊ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಉತ್ತರವನ್ನು ತರಿಸಿಕೊಡುತ್ತೇನೆ.

ಅಧ್ಯಕ್ಷರು.—ಶ್ರೀ ವಸಂತ ವಿ. ಸಾಲಿಯಾನ : ಗೈರುಹಾಜರಿ.

ಶ್ರೀ ಬಿ. ಲಕ್ಕಪ್ಪ.—ಗೈರುಹಾಜರಿ.